ಜಾಹೀರಾತು



# ಅಂಡಾಣು ದಾನ ಐ.ವಿ.ಎಫ್ ವರದಾನ



## ಪ್ರಶ್ನೆ? ಪರಿಹಾರ

ಡಾ|| ಆಶಾ. ಎಸ್.ವಿಜಯ್
ಗರ್ಭಗುಡಿ ಐವಿಎಫ್ ಸೆಂಟರ್

**9886915556/ 080-26673777**

**ಅಂಡಾಶಯದಲ್ಲಿ ಅಂಡಾಣು ಇರದಿದ್ದರೂ ಮಕ್ಕಳಾಗಬಹುದು ಎನ್ನುವುದು ಈಗ ಸಾಬೀತಾಗುತ್ತಿದೆ. ಐ.ವಿ.ಎಫ್. ಮಕ್ಕಳಿಲ್ಲ ಎನ್ನುವವರ ಪಾಲಿಗೆ ಭರವಸೆ ಆಗಿದೆ. ಸಮಸ್ಯೆ ಅರಿಯದೇ ಪರಿಹಾರ ಹುಡುಕಿದರೆ ಅದು ದೊರೆಯಲಾರದು. ಯಾವುದೇ ಚಿಕಿತ್ಸೆಗೂ ಮೊದಲು ತೊಂದರೆ ಏನು ಎನ್ನುವುದನ್ನು ತಿಳಿದುಕೊಳ್ಳಲೇ ಬೇಕು. ಮುಖ್ಯವಾಗಿ ನಾವು ನಮ್ಮಲ್ಲಿ ಇರಬಹುದಾದ ದೋಷಗಳನ್ನು ಒಪ್ಪಿಕೊಂಡು ಚಿಕಿತ್ಸೆಗೆ ಸಹಕರಿಸಿದಾಗಲೇ ಉತ್ತಮ ಫಲಿತಾಂಶ ಸಿಗುತ್ತದೆ**

ಅವಳಿಗೆ ಹುಟ್ಟಾ ಕಿವಿ ಕೇಳಿಸುತ್ತಿರಲಿಲ್ಲ. ಎಷ್ಟೆಲ್ಲ ಚಿಕಿತ್ಸೆ ಮಾಡಿದರೂ ಏನೂ ಪ್ರಯೋಜನ ಆಗಲಿಲ್ಲ. ಕಿವಿ ಕೇಳದೆ ಇರುವುದರಿಂದ ಅವಳಿಗೆ ಮಾತನಾಡಲೂ ಬರುತ್ತಿರಲಿಲ್ಲ. ಗಂಟಲಿನಿಂದ ಶಬ್ಧ ಮಾಡುತ್ತಿದ್ದಳು. ಅಂದರೆ ಧ್ವನಿ ಹೊರಡಿಸುತ್ತಿದ್ದಳೇ ಹೊರತು ಮಾತು ಬರುತ್ತಿರಲಿಲ್ಲ. ಕಿವಿ ಕೇಳುವುದಿಲ್ಲ ಎನ್ನುವುದನ್ನು ಬಿಟ್ಟರೆ ಅವಳಿಗೆ ಯಾವುದೇ ದೈಹಿಕ ಸಮಸ್ಯೆ ಇರಲಿಲ್ಲ. ಹಾಗಾಗಿ ಸಹಜವಾಗಿಯೇ ದೇಹದಲ್ಲಿ ಬೆಳವಣಿಗೆ ಆಯಾ ವಯಸ್ಸಿಗೆ ತಕ್ಕ ಹಾಗೆ ಇತ್ತು. ಸರಿಯಾದ ಕಾಲಕ್ಕೆ ಮುಟ್ಟು ಆರಂಭವಾಗಿತ್ತು. ದೇಹದಲ್ಲಿ ಇದಕ್ಕೆ ತಕ್ಕಂತೆ ಎಲ್ಲ ಬದಲಾವಣೆಗಳೂ ಆದವು. ಈ ಎಲ್ಲ ಬದಲಾವಣೆ ಆಗುತ್ತಿದ್ದಾಗ ಅವಳ ಅಮ್ಮನಿಗೆ ಒಂದು ಆತಂಕ, ಕಿವಿ ಕೇಳದ ಮಾತು ಬಾರದ ಇವಳನ್ನು ಯಾರಾದರೂ ಲೈಂಗಿಕವಾಗಿ ಕಿರುಕುಳ ಕೊಡಬಹುದು. ದುರ್ಬಳಕೆ ಮಾಡಿಕೊಂಡರೆ. ಹಾಗೇನಾದರೂ ಆದರೆ ಅವಳಿಗೆ ಹೇಳಿಕೊಳ್ಳಲು ಆಗುವುದಿಲ್ಲ. ಏನು ಮಾಡುವುದು?

ಅವಳ ಶಾಲಾ ದಿನಗಳಲ್ಲಿ, ಓದಿನ ಸಂದರ್ಭದಲ್ಲಿ ಇದೇ ಆತಂಕ ಅವರನ್ನು ಭಾದಿಸುತ್ತಿತ್ತು. ವಯಸ್ಸಿಗೆ ಬಂದ ಅವಳನ್ನು ಮದುವೆ ಮಾಡಬೇಕು ಎನ್ನುವುದು ಮನೆಯಲ್ಲಿ ಎಲ್ಲರ ಉದ್ದೇಶ ಆಗಿತ್ತು. ಅವಳಿಗೆ ವರನನ್ನು ಹುಡುಕಲು ಆರಂಭಿಸಿದರು. ಕಣ್ಣು ಕಾಣದ ಆದರೆ ಅತ್ಯಂತ ಸಹೃದಯ ವ್ಯಕ್ತಿಯನ್ನು ಇವಳಿಗೆ ತೋರಿಸಿದರು. ಮೊದಲು ಅವಳಿಗೆ ಈ ಸಂಬಂಧ ಇಷ್ಟ ಆಗಲಿಲ್ಲ. ಕಣ್ಣು ಕಾಣದವನನ್ನು ಒಪ್ಪಿಕೊಳ್ಳುವುದು ಹೇಗೆ? ಆದರೆ ಅವನ ವರ್ತನೆಯಲ್ಲಿನ ಸಜ್ಜನಿಕೆಗೆ ಇವಳು ಮಾರುಹೋದಳು. ನನಗಿರುವ ನ್ಯೂನ್ಯತೆಯನ್ನು ಅವನು ಒಪ್ಪಿಕೊಂಡಂತೆ, ಅವನಲ್ಲಿರುವ ದೋಷವನ್ನೂ ನಾನು ಸ್ವೀಕರಿಸಬೇಕು ಎಂದು ನಿರ್ಧರಿಸಿ ಖುಷಿಯಿಂದಲೇ ಮದುವೆಗೆ ಒಪ್ಪಿಕೊಂಡಳು. ಹೀಗೆ ವೈಕಲ್ಯತೆಗಳುಳ್ಳ ದಂಪತಿಗಳ ಸಂಸಾರ ಸುಖಕರವಾಗಿಯೇ ಸಾಗಿತ್ತು.

ಮದುವೆಯಾಗಿ ಕೆಲವು ವರ್ಷ ಆದರೂ ಮಕ್ಕಳಾಗಲಿಲ್ಲ. ನಮಗಿಬ್ಬರಿಗೂ ಒಂದೊಂದು ತೊಂದರೆ ಇದೆ. ಹುಟ್ಟುವ ಮಗುವಿಗೂ ಈ ತೊಂದರೆ ಬಂದು ಬಿಟ್ಟರೆ ಎನ್ನುವುದು ಇವರ ಆತಂಕ ಆಗಿತ್ತು. ಆದರೆ ಇಂತಹ ಆತಂಕಕ್ಕೆ ಆಸ್ಪದ ಇಲ್ಲ ಎನ್ನುವುದನ್ನು ಮನದಟ್ಟು ಮಾಡಿಸಿದರು. ಸಾಮಾನ್ಯವಾಗಿ ಏನಾದರೂ ವೈಕಲ್ಯ ಇದ್ದಾಗ ನಮ್ಮ ಅದೃಷ್ಟವೇ ಇಷ್ಟು, ನಾವು ಪಡೆದು ಬಂದಿದ್ದು ಹೀಗೆ. ಏನೇನೋ ನಮ್ಮನ್ನೇ ನಾವು ದೂಷಿಸಿಕೊಳ್ಳುವ, ಅನುಕಂಪದಿಂದ ನೋಡುವ, ಭಾವನಾತ್ಮಕವಾಗಿ ಕುಗ್ಗಿ ಹೋಗುವುದೇ ಹೆಚ್ಚು. ಮಕ್ಕಳಾಗಲಿಲ್ಲ ಎನ್ನುವುದನ್ನೂ ಅದೇ ಧಾಟಿಯಲ್ಲಿಯೇ ಬಹಳಷ್ಟು ಜನ ಯೋಚಿಸುವುದನ್ನು ನೋಡಿರುತ್ತೇವೆ.

ಕನಕಪುರ ಸಮೀಪದ ಹಳ್ಳಿಯವರಾದ ಈ ದಂಪತಿಗಳು ಕನಕಪುರದಲ್ಲಿ ನಡೆದ ನಮ್ಮ ಕ್ಯಾಂಪ್‌ಗೆ ಬಂದಿದ್ದರು. ಅವರನ್ನು ವಿವರವಾದ ಪರೀಕ್ಷೆ ನಡೆಸುವುದಕ್ಕೆ ನಮ್ಮ ಜಯನಗರದ ಸೆಂಟರ್‌ಗೆ ಬರಲು ಹೇಳಿದೆವು. ಗಂಡ ಹೆಂಡತಿ ಇಬ್ಬರೂ ಬಂದರು. ಸಂತಾನ ಹೀನತೆಯ ಸಮಸ್ಯೆ ಇರುವಾಗ ಪತಿ ಪತ್ನಿ ಇಬ್ಬರನ್ನೂ ಪರೀಕ್ಷಿಸುತ್ತೇವೆ. ಇಬ್ಬರೂ ಪರೀಕ್ಷೆಗೆ ಒಳಪಡುವುದು ಅತ್ಯಂತ ಅಗತ್ಯ. ಇವರ ವಿಷಯದಲ್ಲೂ ಹಾಗೆ ಆಯಿತು. ಗಂಡ ಹೆಂಡತಿ ಇಬ್ಬರೂ ಆಸ್ಪತ್ರೆಗೆ ಬಂದರು. ಇಬ್ಬರನ್ನೂ ಪರೀಕ್ಷಿಸಿದೆವು. ಗಂಡನಲ್ಲಿ ಯಾವುದೇ ತೊಂದರೆ ಇರಲಿಲ್ಲ. ವೀರ್ಯಾಣು ಉತ್ಪನ್ನ ಚೆನ್ನಾಗಿ ಇತ್ತು. ಅವರ ಲೈಂಗಿಕ ಜೀವನ ಚೆನ್ನಾಗಿಯೇ ಇತ್ತು. ಹಾಗಾದರೆ ಸಮಸ್ಯೆ ಎಲ್ಲಿದೆ? ಪತ್ನಿಯ ಅಂಡಾಶಯದಲ್ಲಿ ಅಂಡಾಣುವಿನ ಉತ್ಪತ್ತಿ ನಿಂತು ಹೋಗಿದೆ. ಚಿಕ್ಕ ವಯಸ್ಸಿನಲ್ಲಿಯೇ ಹೀಗೆ ಅಂಡಾಣುಗಳ ಉತ್ಪತ್ತಿ ನಿಲ್ಲುವುದು ಎಷ್ಟೋ ಸಾರಿ ಜೆನೆಟಿಕ್ ಕಾರಣಗಳಿಂದಲೂ ಆಗಿರಬಹುದು. ಈ ದಂಪತಿಗಳನ್ನು ಕೂಲಂಕುಷವಾಗಿ ವಿಚಾರಿಸಿ, ಅವಲೋಕಿಸಿದಾಗ ಅವಳ ಚಿಕ್ಕಮ್ಮನಿಗೆ 35 ವರ್ಷಕ್ಕೇ ಮುಟ್ಟು ನಿಂತಿತ್ತು.

ಗಂಡ ಹೆಂಡತಿ ಇಬ್ಬರಲ್ಲಿ ಯಾರಿಗೆ ತೊಂದರೆ ಇದ್ದರೂ ಅದನ್ನು ಹೇಳುವುದು, ಹೇಳುವ ರೀತಿ ಬಹಳ ಮುಖ್ಯ. ಮೊದಲು ಯಾರೂ ಅವರಲ್ಲಿರುವ ದೋಷ ಒಪ್ಪಿಕೊಳ್ಳುವುದಿಲ್ಲ. ವೈದ್ಯರೇ ಸರಿಯಾಗಿ ನೋಡಿಲ್ಲ, ನನ್ನಲ್ಲಿ ಏನೂ ತೊಂದರೆ ಇಲ್ಲ ಎನ್ನುವುದೇ ಅವರ ಮೊದಲ ಪ್ರತಿಕ್ರಿಯೆ ಆಗಿರುತ್ತದೆ. ಈ ದಂಪತಿಗಳ ವಿಷಯದಲ್ಲೂ ಹಾಗೇ ಆಯಿತು. ಇಷ್ಟಲ್ಲದೇ ಇಬ್ಬರೂ ತಮಗಿರುವ ವೈಕಲ್ಯತೆಯಿಂದ ಬಾಲ್ಯದಲ್ಲಿಯೇ ನೋವು, ಕೀಳರಿಮೆ, ಸಂಕಷ್ಟ ಪಟ್ಟವರು. ಈಗ ಹೀಗೆ ಅಂಡಾಣುವೇ ಇಲ್ಲ ಎಂದು ಬಿಟ್ಟರೆ ಅವರು ಅದನ್ನು ಹೇಗೆ ಸ್ವೀಕರಿಸುತ್ತಾರೆ. ತಮ್ಮ ಹಣೆಬರಹವೇ ಇಷ್ಟು ಎನ್ನುವ ಹತಾಶೆ ಆವರಿಸುವುದು ಸಹಜ. ಹಾಗಾಗೆ ನಾವು ಸಮಸ್ಯೆಯನ್ನು ಹೆಚ್ಚಿಗೆ ಹೇಳದೆ ಅವರಿಗೆ ಪರಿಹಾರವನ್ನು ಹೇಳಿದೆವು.

ಅವರಿಗೆ ಒಂದು ವಿಷಯವನ್ನು ಸ್ಪಷ್ಟವಾಗಿ ಹೇಳಬೇಕಿತ್ತು. ಏನೆಂದರೆ ಸಹಜವಾಗಿ ಅವರಿಗೆ ಮಕ್ಕಳಾಗುವುದು ಸಾಧ್ಯ ಇಲ್ಲ. ಗರ್ಭದಲ್ಲಿ ಅಂಡಾಣುವಿನ ಉತ್ಪತ್ತಿ ಇಲ್ಲ. ಇದ್ಕಕೆ ಈಗ ಇರುವ ಪರಿಹಾರ ಎಂದರೆ ಅಂಡಾಣುವನ್ನು ಹೊರಗಿನಿಂದ ಪಡೆಯುವುದು. ಅಂಡಾಣು ದಾನ ಈಗ ಬಹುದೊಡ್ಡ ಭರವಸೆ ಆಗಿದೆ. ಅಂಡಾಣುವನ್ನು ಆಯ್ಕೆ ಮಾಡುವಾಗ ಸಾಕಷ್ಟು ಪರೀಕ್ಷೆಗಳು ನಡೆಯುತ್ತದೆ. ಆರೋಗ್ಯವಂತ, ಖಾಯಿಲೆ ರಹಿತ, ಸಶಕ್ತ ಅಂಡಾಣುವಿನ ಆಯ್ಕೆಯ ನಂತರ ಪ್ರಯೋಗಾಲಯದಲ್ಲಿ ಅಂಡಾಣುವಿಗೆ ವೀರ್ಯಾಣುವನ್ನು ಸೇರಿಸಲಾಗುವುದು. ಇದಕ್ಕೂ ಮೊದಲು ಗರ್ಭಕೋಶವನ್ನು ಔಷಧಿ, ಇಂಜೆಕ್ಷನ್ ಮೂಲಕ ಸಿದ್ಧಪಡಿಸಲಾಗುವುದು. ವೀರ್ಯಾಣು, ಅಂಡಾಣುವಿನ ಸಂಯೋಜನೆಯ ನಂತರ ರೂಪ ತಳೆದ ಗರ್ಭವನ್ನು ಗರ್ಭಕೋಶದಲ್ಲಿ ಇಡಲಾಗುವುದು. ಅತ್ಯಂತ ಪರಿಣಿತ ವೈದ್ಯರು, ಸುಸಜ್ಜಿತ ವ್ಯವಸ್ಥೆ ಇದಕ್ಕೆ ಬೇಕು. ಒಮ್ಮೆ ಗರ್ಭಧರಿಸಿದ ನಂತರ ಸ್ಕ್ಯಾನಿಂಗ್ ಇತರೆ ಪರಿಕ್ಷೇಗಳು ನಡೆಯುತ್ತದೆ. ಗರ್ಭಧರಿಸಿದ ಸಂದರ್ಭದಲ್ಲಿ, ಮಕ್ಕಳಾದ ನಂತರ ದಂಪತಿಗಳು ಪಡುವ ಸಂತೋಷ, ಆನಂದ. ಅವರ ಮುಖದಲ್ಲಿ ಅರಳುವ ಸಾರ್ಥಕ ಭಾವನೆ ನಮ್ಮಲ್ಲಿ ಧನ್ಯತೆಯನ್ನು ಮೂಡಿಸುತ್ತದೆ. ಹೀಗೆ ಅಂಡಾಣುವೇ ಇರದಿದ್ದರೂ ಮಗುವನ್ನು ಪಡೆಯಬಹುದು ಎನ್ನು ವುದನ್ನು ಅವರ ಬದುಕಿನಿಂದಲೇ ಕಂಡುಕೊಂಡ ಈ ದಂಪತಿಗಳಿಗೆ ಈಗ ಮುದ್ದಾದ, ಆರೋಗ್ಯವಂತ ಅವಳಿ ಮಕ್ಕಳಿದ್ದಾರೆ.

### ಪ್ರಶ್ನೆ ಪರಿಹಾರ

**ಇನ್ನೂ ಯಾಕೆ ಮಕ್ಕಳಾಗುತ್ತಿಲ್ಲ, ತೊಂದರೆ ಏನಿರಬಹುದು?**

ಇತ್ಯಾದಿ ನಿಮ್ಮ ಪ್ರಶ್ನೆಗಳಿಗೆ ಈ ಅಂಕಣದಲ್ಲಿ ತಜ್ಞ ವೈದ್ಯರು ಉತ್ತರಿಸುತ್ತಾರೆ. ನಿಮ್ಮ ಪ್ರಶ್ನೆಗಳನ್ನು ಈ ವಿಳಾಸಕ್ಕೆ ಕಳುಹಿಸಿ 210/ಎ, 50 ಅಡಿ ರಸ್ತೆ, 14ನೇ ಮುಖ್ಯ ರಸ್ತೆ, ಹನುಮಂತನಗರ, ಬೆಂಗಳೂರು–560 050

**ದೂರವಾಣಿ/ಎಸ್‌ಎಂಎಸ್: 98869 15556 / 8884183338 / 9148038971 Toll Free: 1-800-200-8288**